# ಟ್ರಾಯ್ ನಿಯಮ; 'ಒಟಿಪಿ'ಗೆ ಪರದಾಟ

■ **ಶಶಿಕುಮಾರ್ ಸಿ.**

ಎಸ್‌ಎಂಎಸ್, ಒಟಿಪಿ ಆಹ್ವಾನದ ಸಂದೇಶಗಳಿಂದ ಸೈಬರ್ ವಂಚನೆಗಳು ದಿನೇ ದಿನೇ ಹೆಚ್ಚಾಗುತ್ತಿರುವ ಬೆನ್ನಲ್ಲೇ ಭಾರತೀಯ ದೂರಸಂಪರ್ಕ ಪ್ರಾಧಿಕಾರವು (ಟ್ರಾಯ್) 2018ರ 'ಗ್ರಾಹಕರ ಆದ್ಯತಾ ದೂರಸಂಪರ್ಕ ಸಂವಹನ ಕಾಯ್ದೆ'ಯನ್ನು (ಟೆಲಿಕಾಂ ಕಮ್ಯುನಿಕೇಷನ್ಸ್ ಕಸ್ಟಮರ್ ಪ್ರಿಫೆರೆನ್ಸ್ ರೆಗ್ಯುಲೇಷನ್ಸ್ – ಸಿಸಿಪಿಆರ್) ಈಚೆಗಷ್ಟೇ ತಾತ್ಕಾಲಿಕವಾಗಿ ಅಮಾನತಿನಲ್ಲಿಟ್ಟು, ಎಸ್‌ಎಂಎಸ್ ಪರಿಶೀಲನಾ ನೀತಿಯನ್ನು ಜಾರಿಗೊಳಿಸಿದೆ.

ಈ ಎಸ್‌ಎಂಎಸ್ ಪರಿಶೀಲನಾ ನೀತಿಯನ್ನು ಈಗಾಗಲೇ ಜಾರಿ ಮಾಡಲಾಗಿದೆ. ಆದರೆ, ಜಾರಿಗೊಂಡ ಹೊಸ ನೀತಿಯಲ್ಲಿ ಕೆಲವೊಂದು ಗೊಂದಲಗಳಿದ್ದು ಅವುಗಳನ್ನು ಸರಿಪಡಿಸಲು ಇನ್ನಷ್ಟು ಸಮಯದ ಅಗತ್ಯವಿದೆ. ಹೀಗಾಗಿ, ಅನಿವಾರ್ಯವಾಗಿ ಒಟಿಪಿಯಂತಹ ಕೆಲ ಪ್ರಮುಖ ಸಂದೇಶ ರವಾನೆ ಹಾಗೂ ಸ್ವೀಕಾರ ಸೇವೆಗಳ ಮೇಲೆ ಇದು ಪರಿಣಾಮ ಬೀರಿದ್ದು, ಸಾರ್ವಜನಿಕರಿಗೆ ಪರದಾಡುವಂತಾಗಿದೆ.

ಬ್ಯಾಂಕ್ ವಹಿವಾಟು ಸೇರಿದಂತೆ ಇನ್ನಿತರ ಸೇವೆಗಳಿಗೆ ಒನ್ ಟೈಮ್ ಪಾಸ್‌ವರ್ಡ್‌ಗಳು ಅವಶ್ಯಕ. ಹೊಸ ಎಸ್‌ಎಂಎಸ್ ರೆಗ್ಯುಲೇಷನ್ಸ್ ಜಾರಿಗೆ ಬಂದ ಬಳಿಕ ಇಕಾಮರ್ಸ್ ಕಂಪನಿಗಳು ಮತ್ತು ಬ್ಯಾಂಕ್‌ಗಳ ಒಟಿಪಿಗಳಂತಹ ಸೇವೆಗಳು ಮಾರ್ಚ್ 8ರ ನಂತರ ಸುಲಭವಾಗಿ ಲಭ್ಯವಾಗುತ್ತಿಲ್ಲ. ಇದರಿಂದ ಹಲವು ಗ್ರಾಹಕರು




ಪರದಾಡುತ್ತಿದ್ದಾರೆ. ಈ ಬಗ್ಗೆ ಟೆಲಿಕಾಂ ಆಪರೇಟರ್‌ಗಳು ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಹೊಸ ಎಸ್‌ಎಂಎಸ್ ನಿಯಮಗಳೇ ಇದಕ್ಕೆ ಕಾರಣ ಎಂದು ಉದ್ಯಮ ಮೂಲಗಳು ತಿಳಿಸಿವೆ.

ಹೊಸ ಎಸ್‌ಎಂಎಸ್ ರೆಗ್ಯೂಲೇಷನ್ಸ್ ಜಾರಿಗೆ ಬಂದ ಬಳಿಕ ದೊಡ್ಡ ಪ್ರಮಾಣದಲ್ಲಿ ಒಟಿಪಿಗಳನ್ನು ಕಳುಹಿಸಲಾಗುತ್ತಿಲ್ಲ. ಈ ಕಾರಣದಿಂದ ಬ್ಯಾಂಕ್‌ಗಳಿಗೆ ದೂರುಗಳ ಮಹಾಪೂರವೇ ಹರಿದುಬಂದಿದೆ. ಫಂಡ್ ಟ್ರಾನ್ಸ್‌ಫರ್ ಮಾಡಬಯಸುವ ಗ್ರಾಹಕರಿಗೆ ಒಟಿಪಿ ಸಿಗದ ಕಾರಣ ಅವರು ಅಡಚಣೆ ಎದುರಿಸಬೇಕಾಗಿ ಬಂದಿದೆ. ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸದೇ ಕಾಯ್ದೆಯನ್ನು ಅಮಾನತಿನಲ್ಲಿಟ್ಟು ಆದೇಶ ಹೊರಡಿಸಿರುವುದೇ ಈ ಅಡಚಣೆಗೆ ಕಾರಣ ಎನ್ನುತ್ತಿವೆ ಬ್ಯಾಂಕಿಂಗ್ ಮೂಲಗಳು.

ಆಧಾರ್ ದೃಢೀಕೃತ ಸೇವೆಗಳಿಗೂ ಸಮಸ್ಯೆಯ ಬಿಸಿ ತಟ್ಟಿದ್ದು, ಆಧಾರ್ ಸೇವಾ ಕೇಂದ್ರಗಳಲ್ಲಿ ಸಾರ್ವಜನಿಕರು ಸಾಲುಗಟ್ಟಿ ನಿಲ್ಲುವಂತಾಗಿದೆ. ಅಲ್ಲದೇ, 'ನಿಮಗೆ OTP ಸೇವೆ ನೀಡಲು ನಾವು ದೃಢೀಕರಣ ಸೇವೆಯನ್ನು ತಲುಪಲು ಸಾಧ್ಯವಿಲ್ಲ. ದಯವಿಟ್ಟು ನಂತರ ಮತ್ತೊಮ್ಮೆ ಪ್ರಯತ್ನಿಸಿ' ಅನ್ನುವ ಸಂದೇಶವನ್ನು ಆಧಾರ್ ಪ್ರಾಧಿಕಾರವು ತನ್ನ ಅಧಿಕೃತ ವೆಬ್‌ಸೈಟ್‌ನ ಪ್ರಕಟಣೆಯಲ್ಲಿ ತಿಳಿಸಿದೆ. ಆನ್‌ಲೈನ್ ಪೇಮೆಂಟ್ ಮಾಡುವಾಗಲೂ ಒಟಿಪಿ ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ ಎಂದು ಹಲವು ಮಂದಿ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಂತರ್ಜಾಲ ವಂಚನಾ ಕೃತ್ಯಗಳಿಂದ ಬಚಾವಾಗಲು ಈ ಆದೇಶವನ್ನು ಹೊರಡಿಸಲಾಗಿದೆ ಎಂದು ಟ್ರಾಯ್ ಸ್ಪಷ್ಟನೆ ನೀಡಿದೆ. ಹಣ ಸಂಪಾದನೆಯನ್ನೇ ಧ್ಯೇಯವಾಗಿಸಿಕೊಂಡಿರುವ ಕೆಲ ಟೆಲಿಕಾಂ ಮಾರ್ಕೆಟಿಂಗ್ ಕಂಪನಿಗಳು ಗ್ರಾಹಕರಿಗೆ ಕಳುಹಿಸಲಾಗುವ ಒಟಿಪಿಯನ್ನು ಟ್ರಾಯ್‌ನ ಅನುಮತಿ ಪಡೆಯದೇ ಕಳುಹಿಸುತ್ತಿವೆ. ಇದರಿಂದ ವಂಚನೆಗಳು ನಡೆಯುತ್ತಿವೆ. ಇದನ್ನು ತಡೆಗಟ್ಟಲು ಎಸ್‌ಎಂಎಸ್ ಪರಿಶೀಲನಾ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ, ಈ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸದೆ ಇದ್ದ ಕಾರಣದಿಂದ ವಹಿವಾಟುಗಳಲ್ಲಿ ಅಡಚಣೆಗಳು ಎದುರಾಗುತ್ತಿವೆ. ■

# ವಾಟ್ಸ್‌ಆ್ಯಪ್ ಇನ್ನಷ್ಟು ಬಲಿಷ್ಠ!

ತನ್ನ ಹೊಸ ನೀತಿಯಿಂದ ಭಾರಿ ಟೀಕೆಗೆ ಗುರಿಯಾಗಿದ್ದ ವಾಟ್ಸ್‌ಆ್ಯಪ್; ಬಳಕೆದಾರರು ತಮ್ಮ ಕ್ಲೌಡ್ ಚಾಟ್ ಬ್ಯಾಕಪ್‌ಗಳನ್ನು ಪಾಸ್‌ವರ್ಡ್–ಪ್ರೊಟೆಕ್ಷನ್ ಮತ್ತು ಎನ್‌ಕ್ರಿಪ್ಟ್ ಮಾಡಲು ಅನುವು ಮಾಡಿಕೊಡುವ ಹೊಸ ಫೀಚರ್ ಅಭಿವೃದ್ಧಿ ಪಡಿಸುವತ್ತ ಕಾರ್ಯ ನಿರ್ವಹಿಸುತ್ತಿದೆ.

ಕ್ಲೌಡ್ ಚಾಟ್ ಬ್ಯಾಕಪ್‌ಗಳಿಗೆ ಪಾಸ್‌ವರ್ಡ್–ಪ್ರೊಟೆಕ್ಷನ್ ಫೀಚರ್ ಪರಿಚಯಿಸಲು ವಾಟ್ಸ್‌ಆ್ಯಪ್ ಮುಂದಾಗಿದೆ. ಫೇಸ್‌ಬುಕ್ ಒಡೆತನದ ಎಲ್ಲ ಪ್ಲಾಟ್‌ಫಾರ್ಮ್‌ಗಳಲ್ಲಿ ಚಾಟ್‌ಗಳನ್ನಷ್ಟೇ ಎಂಡ್ ಟುಎಂಡ್ ಎನ್‌ಕ್ರಿಪ್ಟ್ ಮಾಡಲಾಗುತ್ತಿತ್ತು. ಚಾಟ್ ಬ್ಯಾಕಪ್‌ಗಳು ಎಂಡ್ ಟು ಎಂಡ್ ಎನ್‌ಕ್ರಿಪ್ಟ್ ಮಾಡಲಾಗುತ್ತಿರಲಿಲ್ಲ.




ಕ್ಲೌಡ್ ಚಾಟ್ ಬ್ಯಾಕಪ್‌ಗಳನ್ನು ಪಾಸ್‌ವರ್ಡ್–ಪ್ರೊಟೆಕ್ಷನ್ ಮತ್ತು ಎನ್‌ಕ್ರಿಪ್ಟ್ ಮಾಡಲು ಅನುವು ಮಾಡಿಕೊಡುವ ಈ ಫೀಚರ್‌ನ ಬಗ್ಗೆ ವಾಟ್ಸ್‌ಆ್ಯಪ್ ತನ್ನ ಬ್ಲಾಗ್‌ನಲ್ಲಿ (WABetaInfo) ಅಧಿಕೃತವಾಗಿ ಪ್ರಕಟಿಸಿದೆ. ಇದಿನ್ನೂ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರವೇ ಜಾರಿಗೆ ಬರುವ ಸಾಧ್ಯತೆ ಇದೆ.

ಅಲ್ಲದೇ ಬ್ಲಾಗ್‌ನಲ್ಲಿ ಈ ಫೀಚರ್‌ನ ಕೆಲವು ಸ್ಕ್ರೀನ್‌ಶಾಟ್‌ಗಳನ್ನು ಪ್ರಕಟಿಸಿದ್ದು, ಚಾಟ್ ಬ್ಯಾಕಪ್ ಎನ್‌ಕ್ರಿಪ್ಷನ್ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತಿಳಿಸಲಾಗಿದೆ. ಸ್ಕ್ರೀನ್‌ಶಾಟ್‌ನಲ್ಲಿ ನಿಮ್ಮ ಐಕ್ಲೌಡ್ ಡ್ರೈವ್ ಬ್ಯಾಕಪ್‌ಗೆ ಅನಧಿಕೃತ ಪ್ರವೇಶವನ್ನು ತಡೆಯಲು, ನೀವು ಪಾಸ್‌ವರ್ಡ್ ಅನ್ನು ಹೊಂದಿಸಬಹುದು. ಇದು ಭವಿಷ್ಯದ ಬ್ಯಾಕಪ್‌ಗಳನ್ನು ಎನ್‌ಕ್ರಿಪ್ಟ್ ಮಾಡಲು ಬಳಸಲಾಗುತ್ತದೆ. ಈ ಫೀಚರ್‌ಗೆ ಪ್ರತ್ಯೇಕ ಪಾಸ್‌ವರ್ಡ್ ಅಗತ್ಯವಾಗಿರಲಿದೆ. ಬಳಕೆದಾರರು ತಮ್ಮ ಬ್ಯಾಕಪ್‌ನಿಂದ 'ರಿ ಸ್ಟೋರ್' ಮಾಡಲು ಪಾಸ್‌ವರ್ಡ್ ಅಗತ್ಯ. ಇನ್ನು ಬಳಕೆದಾರರು ಕನಿಷ್ಠ ಎಂಟು ಅಕ್ಷರಗಳಷ್ಟು ಉದ್ದದ ಪಾಸ್‌ವರ್ಡ್ ಅನ್ನು ನಮೂದಿಸಲೇಬೇಕಾಗಿದೆ.

'ಮರೆತುಹೋದ ಪಾಸ್‌ವರ್ಡ್‌ಗಳನ್ನು ಮರುಪಡೆಯಲು ವಾಟ್ಸ್‌ಆ್ಯಪ್‌ಗೆ ಸಾಧ್ಯವಾಗುವುದಿಲ್ಲ' ಎಂದು ಸ್ಕ್ರೀನ್‌ಶಾಟ್‌ಗಳ ತೆಗೆದ ಫೋಟೊಗಳಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ, ನಿಮ್ಮ ಚಾಟ್‌ಗಳು ಮತ್ತು ಮೀಡಿಯಾ ಬ್ಯಾಕಪ್ ಅನ್ನು ಎನ್‌ಕ್ರಿಪ್ಟ್ ಮಾಡಲು ನೀವು ನಿರ್ಧರಿಸಿದರೆ, ನಿಮ್ಮ ಪಾಸ್‌ವರ್ಡ್ ಅನ್ನು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕಾಗಿರುತ್ತದೆ. ಈ ಪ್ರಮುಖ ಫೀಚರ್ಸ್ ಅಪ್ಡೇಟ್‌ನ ದಿನಾಂಕವನ್ನು ವಾಟ್ಸ್‌ಆ್ಯಪ್ ಇನ್ನೂ ಬಹಿರಂಗ ಪಡಿಸಿಲ್ಲ. ಆಂಡ್ರಾಯ್ಡ್ ಮತ್ತು ಐಒಎಸ್‌ನಲ್ಲೂ ಈ ಸೌಲಭ್ಯ ಲಭ್ಯವಿರಲಿದೆ. ■